**ದಿನಾಂಕಃ 10.04.2026 ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು – ವಾದಿ ಪರ ವಕೀಲರಿಂದ**

2ನೇ ವಾದಿ ಸುರೇಶ್ ನಮ್ಮ ಊರಿನವರಿರುತ್ತಾರೆ. ದಿನಾಂಕಃ 17.12.2018 ರಂದು ಕ್ರಯದ ಕರಾರು ಪತ್ರವನ್ನು 1ನೇ ವಾದಿಗೆ ಮಾಡುವಾಗ 2ನೇ ವಾದಿಯನ್ನು ಸೇರಿಸಿ ಮಾಡಿಕೊಟ್ಟಿದ್ದೇನೆ ಎಂದರೆ ಸರಿಯಲ್ಲ. 2ನೇ ವಾದಿಗೆ ಆದ ಕ್ರಯದ ಕರಾರು ಪತ್ರ ಸರಿಯಲ್ಲವೆಂದು ನನ್ನ ಪ್ರತಿವಾದ ಪತ್ರದಲ್ಲಾಗಲೀ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಬರೆದಿಲ್ಲ ಎಂದರೆ ಸಾಕ್ಷಿಯು ಅದು ನನ್ನ ಗಮನಕ್ಕೆ ಬಂದಿಲ್ಲವೆಂದು ಉತ್ತರಿಸುತ್ತಾರೆ. ನಾನು ಸದರಿ ಕ್ರಯದ ಕರಾರು ಪತ್ರವನ್ನು ಓದಿ ತಿಳಿದುಕೊಂಡಿದ್ದೇನೆ ಅದರಲ್ಲಿ 2ನೇ ವಾದಿಯ ಹೆಸರಿರುತ್ತದೆ ಎಂದರೆ ಸರಿ. ತದ ನಂತರ ಕೂಡ ನನ್ನ ಪ್ರತಿವಾದ ಪತ್ರದಲ್ಲಾಗಲೀ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಕ್ರಯದ ಕರಾರು ಪತ್ರ ಸರಿಯಿಲ್ಲವೆಂದು ಬರೆದಿಲ್ಲ ಎಂದರೆ ಸಾಕ್ಷಿಯು ನಾನು 1ನೇ ವಾದಿಯ ಜೊತೆ ಆ ಬಗ್ಗೆ ಮಾತನಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಈ ದಾವೆ ಸಲ್ಲಿಸುವ ಪೂರ್ವದಲ್ಲಿ ವಾದಿಗಳು ನನಗೆ ಕಾನೂನು ತಿಳುವಳಿಕೆ ನೋಟಿಸ್ ಕೊಟ್ಟ ನಂತರ ನಾನು 1ನೇ ವಾದಿಯ ಜೊತೆ ಮಾತನಾಡಿದ್ದೇನೆ. ನನಗೆ ರಿಪ್ಲೆ ನೋಟಿಸ್ ಕೊಡಲು ತೊಂದರೆ ಇರಲಿಲ್ಲ.

ದಾವಾ ಹಾಕುವ ಪೂರ್ವದಲ್ಲಿ ವಾದಿಗಳು ನನ್ನ ಬಳಿ ಸುಮಾರು ಸಲ ಮಾತನಾಡಿದ್ದಾರೆ ಎಂದರೆ ಸರಿಯಲ್ಲ. ವಾದಿಗಳು ದಾವಾ ಹಾಕುವ ಪೂರ್ವದಲ್ಲಿ ಕ್ರಯ ಪತ್ರ ಮಾಡಿಕೊಡಿ ಎಂದು ನನ್ನ ಬಳಿ ಕೇಳಿದ್ದಾರೆ ನಾನು ಒಪ್ಪದಿದ್ದಕ್ಕೆ ನನಗೆ ಕಾನೂನು ತಿಳುವಳಿಕೆ ನೋಟೀಸ್ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸದರಿ ಕಾನೂನು ತಿಳುವಳಿಕೆ ನೋಟೀಸ್‌ನಲ್ಲಿ ಕ್ರಯದ ಬಾಬ್ತು 28 ಲಕ್ಷ ಸಂದಾಯವಾಗಿದೆ ಇನ್ನು ಒಂದು ಲಕ್ಷ ಕೊಡಲು ತಯಾರಿದ್ದೇವೆ ಎಂದು ವಾದಿಗಳು ಹೇಳಿದ್ದಾರೆ ಎಂದರೆ ಸರಿಯಲ್ಲ. ನಾನು ಕ್ರಯ ಪತ್ರ ಮಾಡಿಕೊಡಲು ಸಮಯಾವಕಾಶ ಕೇಳಿದ್ದು ತದ ನಂತರ ಕ್ರಯ ಪತ್ರ ಮಾಡಿಕೊಡದ ಕಾರಣ ಈ ದಾವೆಯನ್ನು ತಂದಿದ್ದಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿರುವ ದಾಖಲೆಗಳ ಬಗ್ಗೆ ನನಗೆ ಅರಿವಿದೆ. ನಿಪಿ–1 ರಿಂದ ನಿಪಿ–3 ಮತ್ತು ನಿಪಿ–6 ರಿಂದ ನಿಪಿ–9 ರಲ್ಲಿ ವಾದಿಗಳು ಖುದ್ದು ಹಾಜರಿಲ್ಲ ಎಂದರೆ ಸರಿ. ನಾನು ವಾದಿಗಳಿಗೆ ಮಾಡಿದ ಕ್ರಯದ ಕರಾರು ಪತ್ರದ ಬಾಧ್ಯತೆಯನ್ನು ತಪ್ಪಿಸಲು ಸದರಿ ದಾಖಲೆಗಳನ್ನು ಸೃಷ್ಟಿ ಮಾಡಿ ಹಾಜರು ಮಾಡಿದ್ದೇನೆ ಎಂದರೆ ಸರಿಯಲ್ಲ. ದಿನಾಂಕಃ 17.12.2018 ರಂದು ವಾದಿಗಳಿಗೆ ಕ್ರಯದ ಕರಾರು ಪತ್ರ ಬರೆದುಕೊಟ್ಟು 18 ಲಕ್ಷ ಚೆಕ್ಕಿನ ಮೂಲಕ ಮತ್ತು 13 ಲಕ್ಷ ನಗದು ಮೂಲಕ ವಾದಿಗಳಿಂದ ಪಡೆದುಕೊಂಡಿದ್ದೇನೆ ಎಂದರೆ ಸರಿಯಲ್ಲ. ಈ ವಿಚಾರಗಳೆಲ್ಲಾ ಗೊತ್ತಿದ್ದರೂ ವಾದಿಗಳಿಗೆ ಮೋಸ ಮಾಡಲು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಾನು ವಾದಿಗಳಿಂದ ಕ್ರಯದ ಬಾಬ್ತು ಒಂದು ಲಕ್ಷ ಪಡೆದುಕೊಂಡು ಕ್ರಯ ಪತ್ರ ಬರೆದುಕೊಡಲು ಬಾಧ್ಯನಿದ್ದೇನೆ ಎಂದರೆ ಸರಿಯಲ್ಲ. ನನಗೆ ಪ್ರಾಸಾ 2 ರಿಂದ ಪ್ರಾಸಾ 4 ರವರ ಪರಿಚಯವಿದೆ. ಸದರಿ

ಫ್ರಾಸಾ 2 ರಿಂದ ಫ್ರಾಸಾ 4 ರವರು ಸದರಿ ಕ್ರಯದ ಕರಾರು ಪತ್ರದಲ್ಲಿ ಭಾಗಿಯಾಗಿಲ್ಲ ಎಂದು ನನ್ನ ಪ್ರತಿವಾದ ಪತ್ರದಲ್ಲಾಗಲೀ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಾಗಲೀ ಹೇಳಿಲ್ಲ ಎಂದರೆ ಸರಿ.

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಪಡಿಸಲಾಯಿತು.

ಓ ಹೇ ಕೇ ಸಾ ಸ ಇ ಒ

(ಸುನೀತ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾ ದಂ. ಕೊಳ್ಳೇಗಾಲ.